ಸಹಕಾರ ಸಂಘಗಳ ನಿಬಂಧಕರ ಕಛೇರಿ ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು –52**

ಸಂ:ಆರ್‌ಸಿಎಸ್/ಎಡಿಎಂ–3/29/ಕರಾಪನೋಅ/2020–21. ದಿನಾಂಕ: 26–08–2021

## –:ಆದೇಶ:–

**ವಿಷಯ:–** ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು ನೋಡಲ್ ಅಧಿಕಾರಿ ನೇಮಿಸುವ ಬಗ್ಗೆ.

**ಉಲ್ಲೇಖ:–**
1. ಸರ್ಕಾರದ ಆದೇಶ ಸಂ: ಸಿಆಸುಇ/134/ಕತವ/2019/ ಬೆಂಗಳೂರು, ದಿನಾಂಕ:29–11–2019.
2. ಈ ಕಛೇರಿ ಇದೇ ಸಮಸಂಖ್ಯೆ ಆದೇಶ ದಿನಾಂಕ: 20–03–2021.

***

ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ದಿನಾಂಕ:01–01–2020 ರಿಂದ ಕರ್ನಾಟಕ ರಾಜ್ಯ ಪತ್ರವನ್ನು ಇ–ರಾಜ್ಯಪತ್ರವನ್ನವಾಗಿ ಪ್ರಕಟಣೆ ಮಾಡುವ ಸಲುವಾಗಿ ಇಲ್ಲಿಯವರೆಗೆ ರಾಜ್ಯ ಪತ್ರವನ್ನು ಪ್ರಕಟಿಸಿ ಮುದ್ರಿಸುವ ಕೆಲಸ ರದ್ದಾಗಲಿದ್ದು, ಈ ಇಲಾಖೆಯಿಂದ ಅಧಿಸೂಚನೆಗಳನ್ನು / ಆದೇಶಗಳನ್ನು / ಸುತ್ತೋಲೆಗಳನ್ನು ರಾಜ್ಯ ಪತ್ರಕ್ಕೆ ಕಳುಹಿಸಿಕೊಡಲು ಇಲಾಖೆಯಿಂದ ಗುರುತಿಸಲ್ಪಟ್ಟ ನೋಡಲ್ ಅಧಿಕಾರಿಗಳ ಮುಖಾಂತರವೇ ವೆಬ್‌ಸೈಟ್‌ನಲ್ಲಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರ ವ್ಯಾಪ್ತಿಗೆ ಒಳಪಡುವಂತೆ ಹೊರಡಿಸುವ ಅಧಿಸೂಚನೆಗಳನ್ನು/ ಆದೇಶಗಳನ್ನು/ಸುತ್ತೋಲೆಗಳನ್ನು ಇ–ರಾಜ್ಯ ಪತ್ರದ ವೆಬ್‌ಸೈಟ್‌ನಲ್ಲಿ ಸಲ್ಲಿಸುವ ಸಂಬಂಧ ಉಲ್ಲೇಖ (2) ರ ಆದೇಶವನ್ನು ಮಾರ್ಪಡಿಸಿ ಶ್ರೀಮತಿ ಎಸ್.ಕೆ.ಕವಿತ, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಆಡಳಿತ), ಕೇಂದ್ರ ಕಛೇರಿ, ಇವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರು
**ಕರ್ನಾಟಕ ರಾಜ್ಯ, ಬೆಂಗಳೂರು.**

**ಗೆ,**

1. ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ,
2. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ,
3. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ
4. ರಾಜ್ಯದ ಎಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ
5. ಸಹಕಾರ ಸಂಘಗಳ ಸಹಾಯಕ ನಿಬಂಧಕರು(ಗಣಕ ಕೋಶ) ರವರಿಗೆ ಕಳುಹಿಸುತ್ತಾ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.